ಸಂಡೂರಿನಲ್ಲಿ ವೃತ್ತ ಆರಕ್ಷಕ ನಿರೀಕ್ಷಕರ ಕಛೇರಿ

೧೬೪೪. ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಂಡೂರು ಪೋಲೀಸ್ ಸರ್ಕಲ್‌ಗೆ ಮೂರು ತಾಲ್ಲೂಕಿನ ಒಂದೊಂದು ಭಾಗಗಳು ಸೇರಿರುವುದು ನಿಜವಲ್ಲವೇ?

ಆ) ಮರಿಯಮ್ಮನ ಹಳ್ಳಿ ಠಾಣೆಯನ್ನು ಸಂಡೂರು ಸರ್ಕಲ್ ವ್ಯಾಪ್ತಿಯಿಂದ ತೆಗೆದು ಗಾದಿಗನೂರು, ಠಾಣೆ ಜೋರುನೂರು ಹೋಬಳಿಯನ್ನು ಸೇರಿಸಿ ಒಂದು ಸರ್ಕಲ್ ಮಾಡುವ ಯೋಜನೆ ಏನಾದರೂ ಸರ್ಕಾರದಲ್ಲಿ ಇದೆಯೇ?

ಇ) ಹಾಗಿದ್ದಲ್ಲಿ ಇದನ್ನು ಯಾವಾಗ ಕಾರ್ಯಗತ ಮಾಡಲಾಗುವುದು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಹೌದು.

ಆ) ಇದೆ.

ಇ) ಈ ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದ್ದು ಆದಷ್ಟು ಜಾಗ್ರತೆ ತೀರ್ಮಾನ ತೆಗೆದುಕೊಳ್ಳಲಾಗುವುದು.

ಶ್ರೀ ಯು. ಭೂಪತಿ.—ಆದಷ್ಟು ತೀವ್ರವಾಗಿ ತೀರ್ಮಾನ ತೆಗೆದುಕೊಳ್ಳಲಾಗುವುದೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈ ಪ್ರಶ್ನೆಯನ್ನು ನಾನು ಏಕೆ ಕೇಳಿದೆ ಎಂದರೆ ಸಂಡೂರಿನ ಮೂರು ಹೋಬಳಿಗಳು ಅದರ ಜೊತೆಗೆ ಹೊಸಪೇಟೆ ತಾಲ್ಲೂಕಿನ ಗಾದಿಗನೂರು ಹೋಬಳಿಯನ್ನು ಸೇರಿಸಿ ಸಂಡೂರು ತಾಲ್ಲೂಕಿಗೆ ಅಟ್ಯಾಚ್ ಮಾಡಿದ್ದಾರೆ. ಜೋರುನೂರು ಅನ್ನು ಸೇರಿಸಿ ಗಂಡೇಕೋಟೆಯಲ್ಲಿ ಪೋಲೀಸ್ ಸ್ಟೇಷನ್ ಮಾಡಿದ್ದಾರೆ. ಅದಕ್ಕೆ ಅಟ್ಯಾಚ್ ಮಾಡಿದ್ದಾರೆ. ಅದೇ ರೀತಿ ಮರಿಯಮ್ಮನಹಳ್ಳಿಯನ್ನು ಸಂಡೂರ್ ತಾಲ್ಲೂಕಿಗೆ ಅಟ್ಯಾಚ್ ಮಾಡಿದ್ದಾರೆ. ಇದರಿಂದ ಜಿಯಾಲಾಜಿಕಲ್ ಆಗಿಯೂ ತೊಂದರೆಯಾಗಿದೆ. ಅದೇ ರೀತಿ ಅಡ್ಮಿನಿಸ್ಟ್ರೇಟಿವ್ ದೃಷ್ಟಿಯಿಂದ ಕೂಡ ಒಳ್ಳೆಯದಲ್ಲ. ಜೋರುನೂರು ಹಳ್ಳಿಯಲ್ಲಿರತಕ್ಕ ಔಟ್ ಪೋಸ್ಟ್ ಪೋಲೀಸ್ ಸ್ಟೇಷನ್ ಏನು ಅದಕ್ಕೆ ಒಬ್ಬ ಸಬ್ ಇನ್ಸ್‌ಪೆಕ್ಟರ್ ಅನ್ನು ಪೋಸ್ಟ್ ಮಾಡಿ ಪೂರ್ಣ ಪ್ರಮಾಣದ ಪೋಲೀಸ್ ಸ್ಟೇಷನ್ ಆಗಿ ಪರಿವರ್ತನೆ ಮಾಡುತ್ತೀರಾ? ಇದನ್ನು ಸೇರಿಸಿ ಸಂಡೂರ್ ಸರ್ಕಲ್ ಎಂಬುದಾಗಿ ಮಾಡುತ್ತೀರಾ? ಅದೇ ರೀತಿ ಜೋರುನೂರು ಹೋಬಳಿಯನ್ನು ಸೇರಿಸಿ ಅಲ್ಲಿರತಕ್ಕ ಔಟ್ ಪೋಸ್ಟ್ ಪೋಲೀಸ್ ಠಾಣೆಯನ್ನು ಸೇರಿಸಿ ಸರ್ಕಲ್ ಮಾಡುತ್ತೀರಾ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಸೂಚನೆ ಮಾಡಿರುವಂತಹ ರೀತಿಯೇ ಮಾಡಬೇಕೆಂಬ ಯೋಚನೆ ಸರ್ಕಾರದ್ದು ಇದೆ. ಮರಿಯಮ್ಮನಹಳ್ಳಿಯಲ್ಲಿರತಕ್ಕ ಠಾಣೆಯನ್ನು ತೆಗೆದು ಗಾದಿಗನೂರು ಮತ್ತು ಜೋರುನೂರು ಈ ಎರಡೂ ಹೋಬಳಿಗಳನ್ನು ಸೇರಿಸಿ ಒಂದು ಸರ್ಕಲ್ ಮಾಡಬೇಕೆಂದು ಅವರೇ ಸೂಚನೆ ಮಾಡಿದ್ದಾರೆ. ಅದೇ ವಿಚಾರ ಸರ್ಕಾರದ ಗಮನದಲ್ಲಿದೆ.

ಶ್ರೀ ಯು. ಭೂಪತಿ.—ಗಾದಿಗನೂರು ಹಾಗೂ ಜೋರುನೂರುಗಳಲ್ಲಿರುವ ಔಟ್ ಪೋಸ್ಟ್ ಪೋಲೀಸ್ ಠಾಣೆಯನ್ನು ತೆಗೆದು ಪೂರ್ಣ ಪ್ರಮಾಣದ ಪೋಲೀಸ್ ಠಾಣೆಯನ್ನು ಮಾಡಿ ಅದನ್ನು ಸಂಡೂರಿಗೆ ಸೇರಿಸಿ ಒಂದು ಸರ್ಕಲ್ ಆಗಿ ಮಾಡಿದರೆ ಆಗ ಸರಿಹೋಗುತ್ತದೆ. ಅಲ್ಲಿ ಸಿಬ್ಬಂದಿ ಇಲ್ಲ ಹಾಗೂ ವಾಹನ ಕೂಡ ಇಲ್ಲ ಅಲ್ಲಿ ಸರಿಯಾದ ಸೌಕರ್ಯ ಕೂಡ ಇರುವುದಿಲ್ಲ. ಈಗ ಅಲ್ಲಿ ಒಂದೊಂದು ಪೋಲೀಸ್ ಠಾಣೆಯಲ್ಲಿ ೮–೧೦ ಜನ ಇರುತ್ತಾರೆ ಕೋರ್ಟಿಗೆ ಒಬ್ಬರು ಹೋಗಿರುತ್ತಾರೆ. ಸೆಂಟರಿ ಒಬ್ಬರು ಇರುತ್ತಾರೆ. ಇದಾದ ನಂತರ ಯಾರಾದರೂ ದೂರನ್ನು ತೆಗೆದುಕೊಂಡು ಹೋದರೆ, ವಾರೆಂಟ್ ಅನ್ನು ತೆಗೆದುಕೊಂಡು ಹೋಗುವುದಕ್ಕೆ ಯಾರೂ ಇರುವುದಿಲ್ಲ. ಅಷ್ಟು ಕಡಿಮೆ ಜನ ಇದ್ದಾರೆ. ಅವರಿಗೆ ವೆಹಿಕಲ್ ಕೂಡ ಇಲ್ಲ ಅಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಕೂಡ ಮೋಟಾರ್ ವೆಹಿಕಲ್‌ನಲ್ಲಿ ಓಡಾಡುತ್ತಿರುತ್ತಾರೆ. ಅದೇ ರೀತಿ ಸಬ್ ಇನ್ಸ್‌ಪೆಕ್ಟರ್ ಕೂಡ ಮೋಟಾರ್ ವೆಹಿಕಲ್

ನಲ್ಲಿ ಓಡಾಡುತ್ತಾರೆ ಅವರಿಗೆ ವೆಹಿಕಲ್ಸ್‌ಅನ್ನು ಕೊಡಬೇಕು. ಜೋರುನೂರು ಹಳ್ಳಿಯಲ್ಲಿ ಒಂದು ಪೋಲೀಸ್ ಠಾಣೆಯನ್ನು ಮಾಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಇದರ ಬಗ್ಗೆ ಯಾವ ರೀತಿಯ ಸೂಚನೆ ಮಾಡ್ತಾರೋ ಅದೇ ರೀತಿ ಮಾಡುತ್ತೇನೆ.

ಕರ್ನಾಟಕ ಲೋಕಸೇವಾ ಆಯೋಗದ ಸಿಬ್ಬಂದಿಯವರಿಂದ ಕೆಲಸ ತೆಗೆಯುವುದು

೨೮೨ ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ೩ ವರ್ಷಗಳವರೆಗೆ ಯಾವುದೇ ನೇಮಕಾತಿಯನ್ನು ಮಾಡುವುದಿಲ್ಲವೆಂದು ಹೇಳಿಕೆ ನೀಡಿ ಹೊಸ ಸದಸ್ಯರನ್ನು ಕರ್ನಾಟಕ ಲೋಕಸೇವಾ ಆಯೋಗಕ್ಕೆ ನೇಮಕ ಮಾಡಿರುವುದರ ಔಚಿತ್ಯವೇನು?

ಆ) ಹಾಲಿ ಕೆಲಸವೇ ಇಲ್ಲದೇ ಇರುವ ಸದಸ್ಯ ಅಧ್ಯಕ್ಷ ನೌಕರರಿಗೆ ಯಾವ ಹೊಸ ಕೆಲಸ ಕೊಟ್ಟು, ಅವರಿಗೆ ಕೊಡತಕ್ಕ ಸಂಬಳಕ್ಕೆ ತಕ್ಕ ಕೆಲಸವನ್ನು ಮಾಡಿಸುವುದು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು)—

ಅ) ದಿನಾಂಕ ೧೦-೧೧-೧೯೮೭ರಂದು ಉಲ್ಲೇಖಿತ ವಿತವ್ಯಯ ಆದೇಶವನ್ನು ಹೊರಡಿಸಿದ ನಂತರ ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಯಾವುದೇ ಹೊಸ ಸದಸ್ಯರನ್ನು ನೇಮಿಸಿರುವುದಿಲ್ಲ.

ಆ) ಲೋಕಸೇವಾ ಆಯೋಗಕ್ಕೆ ಹಾಲಿ ಕಲಸವೇ ಇಲ್ಲ ಎಂಬ ಸೂಚನೆಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ.

ಶ್ರೀ ಬಿ. ಲಕ್ಕಪ್ಪ.—ಮೂರು ವರ್ಷಗಳ ಕಾಲ ಸರ್ಕಾರದ ಯಾವುದೇ ಹುದ್ದೆಗಳಿಗೆ ನೇಮಕಾತಿ ಇಲ್ಲ ವೆಂದು ಸರ್ಕಾರದ ಪ್ರಕಟಣೆ ಹೊರಡಿಸಿದ ಮೇಲೆ ರಾಜ್ಯದಾದ್ಯಂತ ಚಳುವಳಿ ನಡೆದಿದೆಯೇ ? ಆ ರೀತಿಯ ಚಳುವಳಿಯನ್ನು ನಿರುದ್ಯೋಗಿ ಯುವಕರು ಮಾಡಿಲ್ಲವೇ ? ೧೦-೭-೧೯೮೭ರಿಂದ ನೇಮಕಾತಿ ಯನ್ನು ಮೂರು ವರ್ಷ ತಡೆಹಿಡಿದಿದ್ದೀವಿ ಎಂಬುದು ಇದರ ಅಭಿಪ್ರಾಯವಾಗುವುದಿಲ್ಲವೇ ? ಇದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಸರ್ವತಾ ಅಭಿಪ್ರಾಯ ಅಲ್ಲ. ನಮ್ಮ ಉತ್ತರವನ್ನು ದಯವಾಡಿ ಮಾನ್ಯ ಸದಸ್ಯರು ಇನ್ನೊಂದು ಸಲ ಗಮನಕೊಟ್ಟು ಓದಬೇಕು. ನಾನು ಏನು ಹೇಳಿದ್ದೇನೆಂದರೆ, " ಲೋಕ ಸೇವಾ ಆಯೋಗಕ್ಕೆ ಯಾವುದೇ ಹೊಸ ಸದಸ್ಯರನ್ನು ನೇಮಿಸಿರುವುದಿಲ್ಲ " ಅಂತ ಹೇಳಿದ್ದೇನೆ. ಸರ್ಕಾರಿ ನೌಕರಿಗೆ ಯಾರನ್ನೂ ಸೇರಿಸಿಲ್ಲ ಎಂದು ಹೇಳಿಲ್ಲ. ಒಂದು ಮಾತ್ರ ನಿಜ. ಕೆಲವು ತಿಂಗಳ ಹಿಂದೆ ಕೇಂದ್ರ ಸರ್ಕಾರದಿಂದ ವಿತ್ತವ್ಯಯದ ಬಗ್ಗೆ ಕೆಲವು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸೂಚನೆ ಬಂತು. ಅದೇ ರೀತಿಯ ಸೂಚನೆ ಎಲ್ಲಾ ಸರ್ಕಾರಗಳಿಗೂ ಹೋಗಿದೆ. ಆ ಸೂಚನೆಯನ್ನು ಗಮನದಲ್ಲಿಟ್ಟುಕೊಂಡು ನಾವು ವಿತವ್ಯಯಕ್ಕೆ ಸಂಬಂಧಪಟ್ಟ ಹಾಗೆ ಒಂದು ಆರ್ಡರ್‌ನ್ನು ಹೊರಡಿಸಿದೆವು. ಆದರೆ ಇದರಿಂದ ಮುಖ್ಯವಾಗಿ ನಮ್ಮ ಸುಶಿಕ್ಷಿತ ನಿರುದ್ಯೋಗಿ ಯುವಕರಿಗೆ ಒಂದು ಭಯ ಆಯಿತು. ಇನ್ನು ೩ ವರ್ಷ ನಮಗೆ ಸರ್ಕಾರಿ ನೌಕರಿಯೇ ಸಿಗುವುದಿಲ್ಲ ಎಂದು. ಅದಕ್ಕಾಗಿ ಕೆಲವು ಕಡೆವಿ ರುದ್ಧ ಚಳುವಳಿ ಮಾಡಿದರು. ಆಗ ಈ ವಿಚಾರ ಸದನದ ಮುಂದೆ ಬಂತು. ಸಾಕಷ್ಟು ಚರ್ಚೆ ಕೂಡ ಆಯಿತು. ಅವರ ಮನಸ್ಸಿಗೆ ಯಾವುದೇ ರೀತಿಯ ಭಯ ಆಗ ಬಾರದು ಅಥವಾ ಸಂದೇಹ ಬರಬಾರದು ಎಂದು ಮೊದಲು ಸರ್ಕಾರ ಹೊರಡಿಸಿದ ಆರ್ಡರ್‌ಗೆ ತಿದ್ದುಪಡಿಯನ್ನು ಮಾಡಿದ್ದೇವೆ. ಇದರಿಂದ ಹಿಂದೆ ಯಾವ ರೀತಿ ಇತ್ತು ಅದೇ ರೀತಿ ಇವತ್ತು ಕೂಡ ಇರುತ್ತದೆ. ರೆಕ್ರೂಟ್‌ಮೆಂಟನ್ನು ನಾವು ತಡೆಹಿಡಿಯುವುದಕ್ಕೆ ಹೋಗಿಲ್ಲ. ರೆಕ್ರೂಟ್‌ಮೆಂಟ್ ಬೇರೆ ಬೇರೆ ಹಂತದಲ್ಲಿ ನಡೆಯುತ್ತದೆ. ಜಿಲ್ಲಾಪಂಚಾಯತ್ ಮಟ್ಟದಲ್ಲಿ, ಡಿವಿಜನ್ ಮಟ್ಟದಲ್ಲಿ ಇವತ್ತು ನೇಮಕಾತಿ ನಡೆಯುತ್ತದೆ. ಎಲ್ಲವನ್ನೂ ಲೋಕ ಸೇವಾ ಆಯೋಗವೇ ಮಾಡುವುದಿಲ್ಲ. ಅದು ಯಾವುದನ್ನು ಮಾಡಬೇಕೋ ಅದನ್ನು ಮಾಡುತ್ತದೆ.